ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಣ್ಣಂಗಕಟ್ಟರ ಅರ್ಜಿಯನ್ನು 1889ನೇ ಇಸವಿ ಸೆಪ್ಟೆಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕೆ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಸೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 212.

ಮೃತಪಟ್ಟ ದೊಡ್ಡ ತೀರ್ಥಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚೆನ್ನಮ್ಮನು, ಮೃತಪಟ್ಟ ಸದರೀ ದೊಡ್ಡ ತೀರ್ಥಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲದ ತಾಲ್ಲೂಕು ಕಸಬಾ ಸ್ಥಳದ ಚನ್ನಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ತೀರ್ಥಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾವ ಚನ್ನಮ್ಮನವರ ಅರ್ಜಿಯನ್ನು 1889ನೇ ಇಸವಿ ಸೆಪ್ಟೆಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕೆ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತೀರ್ಥಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜಿ ನಂಬರ್ 219.

ಮೃತಪಟ್ಟ ತಮ್ಮಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜಿದಾರ್ರು 1ನೇ ನರಸುಹ್ಯಾ 2ನೇ ಸುಬ್ಬಯ್ಯ ಮೈನರ್, ಗಾರ್ಡಿಯ್ಯ ತಾಯಿ ದೇವಮ್ಮನವರು, ಮೃತಪಟ್ಟ ಸದರೀ ತಮ್ಮಯ್ಯನವರಿಗೆ ಮಕ್ಕಳು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಜನಬಾದು ತಾಲ್ಲೂಕು ಯಸಳೂರು ಹೋಬಳಿ ನಾರೂರು ಸ್ಥಳದ ಸದರೀ ದೇವಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ತಮ್ಮಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾವ ದೇವಮ್ಮನವರ ಅರ್ಜಿಯನ್ನು 1889ನೇ ಇಸವಿ ಸೆಪ್ಟೆಂಬರ್ ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಮ್ಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಆಗಸ್ಟ್ಪ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ಹಸ್ತಾಕ್ಷರ ಹಾಕೋಡನೆ ಕೊಡೋಣಾಗಿದೆ.

ಎಸ್. ಹೇಮಾಜೆರಾವ್,
ಡಿಸ್ಟ್ರಿಕ್ಟ್ಪ ಜಡ್ಜ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ಞ.

ತಾರೀಖು 31ನೇ ಆಗಸ್ಟ್ಪ 1889.

ಇದರಿಂದ ತಿಳಿಯಪಡಿಸುವದೇನೆಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ಞಗೆ ಕೇರಿದ ಅತ್ತಿಕುಪ್ಪ ಸಬ್ ರಜಿಸ್ಟ್ಪಾರ್ ಆಫೀಸಿನಲ್ಲಿ ಈ ಕೆಳಗೆ ನಮೂದು ಇರುವ ದಸ್ತಾವೇಜು ಕ್ರಮವಾದ ವಾರಸುದಾರ್ರೇ ಆಗಲಿ ಅವರ ಮುಖ್ತಾರೀಕರೇ ಆಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗೆ ಹಾಜರಾಗಿ ಪಡೆಯಬಹುದು, ಹಾಗಿಲ್ಲದ ಭಾಗದಲ್ಲಿ ರಜಿಸ್ಟ್ಪರ್ಡ್ ಆಕ್ಟ್ಪ 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ.

ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಜಿಸ್ಟ್ಪರ್ ತಾರೀಖು.	ಬರೆಸಿಕೊಂಡವನ ಹೆಸರು.	ಬರದುಕೊಟ್ಟವನ ಹೆಸರು.	ದಸ್ತಾವೇಜಿನ ಸ್ವಭಾವ.
15 1887—88	10—4—87	11—4—87	ಅತ್ತಿಕುಪ್ಪ ತಾಲ್ಲೂಕು ಕ ನ್ನಂಬಾಡಿ ಗ್ರಾಮದಲ್ಲಿ ಇರುವ ಗಂಗಡಿಕಾರ್ರು ವಕ್ಕಲಿಗರ ನೀ ಲೇಗೌಡನವಗ ಮರೀಗೌಡ	ಬೆಂಗಳೂರಲ್ಲಿರುವ ಸ್ಮಾರ್ತ ಬ್ರಾಹ್ಮಣ ಬೆಂಗಳೂರು ಸಿವಿಲ್ ಸರಿಗೆ ಪಟ್ಟೇದಾರಾಗಿರುವ ಮತ್ತು ಮಿಲಿಟೇರಿ ಸ್ಟೇಷ್ಟತ್ತು ಸರ್ವೆ 118ನೇ ನಂಬರ್ ಗದ್ದೆ 2ನೇ ಮುನಿಷಿ ಕನ್ನಂಬಾಡಿ ವೆಂಕಟರಾಮಯ್ಯನ ಮಗ ನಾರಾಯಣರಾವ್	ಕನ್ನಂಬಾಡಿ ನಾಲೆಕೆಳಗೆ ನನ್ನ ಹೆಸರಿಂದ ಸಪ 300 ರೂಪಾಯಿಗಳಿಗೆ ಭೋಗ್ಯ

ತಾರೀಖು 17ನೇ ಆಗಸ್ಟ್ 1889.

ಇದರಿಂದ ತಿಳಿಯಪಡಿಸುವದೇನಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವಿಜಿಗೆ ಸೇರಿದ ಶ್ರೀರಂಗಪಟ್ಟಣ ತಾಲ್ಲೂಕು ಸಬ್ ರೆಜಿಸ್ಟ್ರಾರ್ ಆಫೀಸಿನ ಲ್ಲಿ ಈ ಕೆಳಗೆ ನಮೂದು ಇರುವ ದಸ್ತಾವೇಜುಗಳು ಕ್ರಮವಾದ ಮಾರನೆದಾರ್ರ ಅಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುಕಾ ಲೀಕರೇ ಅಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗೆ ಹಾಜರಾಗಿ ಣಾಸನೆಪಡೆಯಬೇಕು, ಹಾಗಿಲ್ಲದ ಭಾಗದಲ್ಲಿ ರೆಜಿಸ್ಟ್ರೀಕರ್ಷ ಆಕ್ಟು 85ನೇ ಸೆಕ್ಷನ್ ಮೇರೆ ನಾಶ ಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜಿನ ತಾರೀಖು.	ರಿಜಿಸ್ಟರಾದ ತಾರೀಖು.	ಬರಸಿಕೊಂಡವನ ಹೆಸರು.	ಬರದುಕೊಟ್ಟವನ ಹೆಸರು.	ದಸ್ತಾವೇಜಿನ ಸ್ವಭಾವ.
201	15 6 86	16 6 86	ಅರಕೆರೇ ಕಸಬಾಕ್ಕೆ ಸೇರಿದ ಸರ್ವಮಾನ್ಯ ಬಳ್ಳೇಕೆರೆಲಿರುವ ದಾಸಶಟ್ಟ	ಪಟೇಲ ವೊರಲ್ಲಿರುವ ನೀಲಗವುಡನಮಗ ನೀಲೆಗವುಡ	ಅರಕೆರೇಲಿರುವ ಜಮೀನನ್ನು 7 ವರುಷ ವಾರ ಸಾಗುವಳಿಗೆ ಬಿಟ್ಟಿರುವ ಪತ್ರ.
338	5 8 86	7 8 86	ಮೈಸೂರು ಮಂಡಿ ಮೊಹಲ್ಲೇಲಿರುವ ಗಂಗಡಿಕಾರ ಚಿಕ್ಕ ಲಿಂಗಣ್ಣ	ಆರಕೆರೆ ಗ್ರಾಮದ ಸ್ಮಾರ್ತ, ಬ್ರಾಹ್ಮಣ ಕೊಂಣೂರು ವೆಂಕಟರಮಣಾಜೋಯಿಸ	200 ರೂಪಾಯಿಗೆ ಭೋಗ್ಯ.
732	2 3 87	16 3 87	ಶ್ರೀರಂಗಪಟ್ಟಣದಲ್ಲಿರುವ ಮಳಿಗೆ ಸಿದ್ದಯ್ಯನ ಮಗ ಆಂಣಯ್ಯ	ಕಿರಂಗೂರು ತೋಬಿ ಯಂಕಾರಕೊಪ್ಪಲು ದಾವಿ ಮಕ್ಕಳಿಗೆ ಕರಾರು. ಇವನ ಮಕ್ಕಳು ಚಲುವ, ಧಾ ತಿ, ಸರಸಾ ವಗೈರೆ	ಸದರೀ ಗ್ರಾಮದ ಜಮೀನು ಗುತ್ತಿಗೆ ಕರಾರು.
628	23 12 86	20 1 87	ಜಹಗೀರ್‌ದಾರು ವಿಟ್ಠಮೂರ್ತಿಗಳ ಮಕ್ಕಳು ಕೃಷ್ಣಮೂರ್ತಿಗಳು	ಗಂಜಾಂನಲ್ಲಿರುವ ತೋಟಪ ರಾಮನ ವೊಮ್ಮಗ ರಾಮಗುತ್ತಿಗೆ ಕರಾರು.	ಶ್ರೀರಂಗಪಟ್ಟಣದಲ್ಲಿರುವ ತೋಟದ
1	3 4 86	13 4 86	ಯಡತೊರೆ ತಾಲ್ಲೂಕು ಕೊಣನೂರು ಗ್ರಾಮದ ವೆಂಕಟರಾಮಯ್ಯನವರ ಮಗ ಹರೀರಾಮಯ್ಯ	ಬಳಗುಳದ ಹೋಬಿ ಹೊಸಹಳ್ಳೀಲಿರುವ ದೊಡ್ಡೇಗೌಡನ ಮಗ ಚನ್ನೇಗೌಡ	250 ರೂಪಾಯಿಯ ನಗದು ಲೇವಾದೇವಿ.
1	25 10 85	0 0 0	ಪಾಲಹಳ್ಳಿ ಕಾನುಭೋಗ ವೆಂಕಟಕೃಷ್ಣಪ್ಪ	ಮೈಸೂರು ಶ್ರೀರಾಮಪೇಟೇಲಿರುವ ವೆಂಕಟನರಸಯ್ಯನ ಮಗ ವೆಂಕಟರಾಮಯ್ಯ	250 ರೂಪಾಯಿಯ ಮನೆ ಕೈಯಪತ್ರ.

ಬಿ. ತಿರುಮಲಾಚಾರ್,
ರೆಜಿಸ್ಟ್ರಾರ್.

ಗವರ್ನಮೆಂಟ್ ತಯಾರೀ ಬಾಬಿತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫಿಸರಿಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ವ್ಯಾಪಾರಸ್ಥನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ವೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟು ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರವ ಡಬ್ಬೀ ಒಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 7—4—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿನೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 4—14—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0, ಒಂದು ಪೌಂಡ್‌ಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟೀವ್ ಮದ್ದಿನಂಗಡಿಯವರಿಂದ ನೂರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ಔನ್ಸ್ ತಗರವ ಡಬ್ಬಿಗೆ 4 ಆಣೆಯೂ 8 ಔನ್ಸ್ ತಗರವ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.